ಹಬೆ. ಮಿರುಗುತ್ತಿರುವ ಬಿಸಿಲು. ಉರಿಬಿಸಿಲಿಗೆ ಅಲ್ಲಿ ನಿಲ್ಲಲಾಗದೆ ಕೋರ್ಟ್ ಹಾಲ್‌ನ ನೆರಳಿಗೆ ಬಂದಳು. ಸ್ವಲ್ಪ ಹೊತ್ತಿಗೆ ಶ್ರೀಲಂಕ ಮಹಿಳೆ ಕೂಡ ಬಂದಳು. ಹೊರಗೆ ನಿಂತು ಬಿಕ್ಕಿ ಬಿಕ್ಕಿ ಅಳುತ್ತಿದ್ದಾಳೆ.

ಈಗ ಆಕೆಯನ್ನೇ ಗಂಭೀರವಾಗಿ ನೋಡಿದಳು ಸಾವಿತ್ರಿ. ಮನದಾಳದಲ್ಲಿ ಆಕೆಯ ಅಳು ಸಾವಿತ್ರಿಯ ಎದೆ ಕಲಕುತ್ತಿದೆ.

'ಎಂತಹ ಕಷ್ಟ ಕಾರ್ಪಣ್ಯಗಳಲ್ಲೂ ನಾನು ಹೀಗೆ ಅತ್ತಿಲ್ಲ. ದೇಶ ಯಾವುದಾದರೂ ಅಳು ಹೀಗೆಯೇ ಇರುತ್ತದಾ...' ಎಂದುಕೊಂಡಳು. ನೋಡ ನೋಡುತ್ತ ಆ ಅಳುವಿನಲ್ಲಿ ತಾನೂ ಒಂದಾಗುತ್ತಿದ್ದಾಳೆ. ಎದೆಯ ತಳಮಳ ಹೆಚ್ಚಾಗುತ್ತಿದೆ.

